# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1384 (1563) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 17-03-2026 |

*****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ನಕಲಿ ಬ್ರಾಂಡ್ ಹೊಂದಿರುವ ಸೂರತ್‌ನ ಕಡಿಮೆ ದರದ ಸಿಂಥೇಟಿಕ್ ಸೀರೆಗಳ ಮಾರಾಟ ಹೆಚ್ಚುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ, ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ಪ್ರಸ್ತುತ ನಕಲಿ ಬ್ರಾಂಡ್ ಹೊಂದಿರುವ ಸೂರತ್‌ನ ಕಡಿಮೆ ದರದ ಸಿಂಥೇಟಿಕ್ ಸೀರೆಗಳ ಮಾರಾಟ ಹೆಚ್ಚುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ) | ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳಿಂದ ಉತ್ಪಾದಿಸಲಾಗುವ ಯಾವ ಯಾವ ಉತ್ಪನ್ನಗಳಿಗೆ, ಯಾವ ಯಾವ ಪ್ರದೇಶಗಳಿಗೆ ಭೌಗೋಳಿಕ ಸೂಚನೆಗಳನ್ನು ಗುರುತಿಸಲಾಗಿದೆ; | ಕೈಮಗ್ಗಗಳಿಂದ ಉತ್ಪಾದಿಸಲಾಗುವ ಪಾರಂಪರಿಕವಾಗಿ ವಿಶ್ವ ಮಾನ್ಯತೆ ಪಡೆದಿರುವ ರಾಜ್ಯ ಕೈಮಗ್ಗದ ಸಮಗ್ರ ಅಭಿವೃದ್ಧಿಗಾಗಿ ಕಾರ್ಯ ಯೋಜನೆಗಳಲ್ಲಿ ಇಳಕಲ್ ಸೀರೆ, ಗುಳೇದಗುಡ್ಡ ಖಣ, ಮೊಳಕಾಲ್ಮೂರು ರೇಷ್ಮೆ ಸೀರೆ ಮತ್ತು ಉಡುಪಿಯ ಕಾಟನ್ ಸೀರೆ, ಗಜೇಂದ್ರಗಡದ ಪಟ್ಟದಂಚಿನ ಸೀರೆ ಈ ಉತ್ಪನ್ನಗಳು ಜಿ.ಐ. ಕಾಯ್ದೆಯಡಿ ನೋಂದಣಿಯಾಗಿರುತ್ತದೆ.<br><br>ವಿದ್ಯುತ್ ಚಾಲಿತ ಮಗ್ಗಗಳಿಂದ ಉತ್ಪಾದಿಸಲಾಗುವ ಉತ್ಪನ್ನಗಳಿಗೆ ಯಾವುದೇ ಭೌಗೋಳಿಕ ಸೂಚನೆಗಳನ್ನು ಗುರುತಿಸಿರುವುದಿಲ್ಲ. |
| ಇ) | ಭೌಗೋಳಿಕ ಸೂಚನೆಗಳನ್ನು ಸೂಚಿಸಲಾಗಿದ್ದರೂ ಸಹಿತ ನೇಕಾರರು ಉತ್ಪಾದಿಸುವ ಉತ್ಪನ್ನಗಳಿಗೆ ಸೂಕ್ತವಾದ ಮಾರುಕಟ್ಟೆ ಸೌಲಭ್ಯಗಳು ದೊರೆಯದೇ ಪರದಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡಿರುವ ಪರಿಹಾರದ ಕ್ರಮಗಳೇನು? | ಭೌಗೋಳಿಕ ಮಾನ್ಯತೆ ಪಡೆದ ಉತ್ಪನ್ನಗಳ ಜೊತೆಗೆ ನೇಕಾರರು ಉತ್ಪಾದಿಸುವ ಇತರೆ ಕೈಮಗ್ಗ ಉತ್ಪನ್ನಗಳಿಗೆ ಈ ಕೆಳಕಂಡಂತೆ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br><br>• ರಾಜ್ಯ ಸರ್ಕಾರದ ವತಿಯಿಂದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು/ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ತಯಾರಿಸಲಾದ ಕೈಮಗ್ಗ ಉತ್ಪನ್ನಗಳಿಗೆ ವರ್ಷದಲ್ಲಿ 365 ದಿನಗಳ ಅವಧಿಗೆ ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮೌಲ್ಯದ ಮೇಲೆ ಶೇಕಡ 20 ರಷ್ಟು ರಿಬೇಟ್ ಮಾರುಕಟ್ಟೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br><br>• ಕೇಂದ್ರ ಸರ್ಕಾರದ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ (National Handloom Development Programme-NHDP) ದಡಿ ರಾಷ್ಟ್ರೀಯ ಕೈಮಗ್ಗ ಮೇಳ |

Scanned by CamScanner

| | | |
|---|---|---|
| | | (National Handloom Expo - NHE), ರಾಜ್ಯ ಮಟ್ಟದ ಕೈಮಗ್ಗ ಮೇಳ (State Handloom Expo - SHE) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (District Handloom Expo-DHE) ಗಳನ್ನು ಆಯೋಜಿಸಿ, ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.<br>• ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಕೈಮಗ್ಗ ನೇಕಾರರಿಗೆ ಉತ್ಕೃಷ್ಟ ಗುಣಮಟ್ಟದ ರೇಷ್ಮೆ ಹಾಗೂ ಹತ್ತಿ ನೂಲನ್ನು ಸರಬರಾಜು ಮಾಡಿ, ಉತ್ಪಾದಿಸಲಾದ ಸಾಂಪ್ರದಾಯಿಕ ರೇಷ್ಮೆ ಸೀರೆ, ಉಡುಪಿ ಸೀರೆ, ಇಳಕಲ್ ಸೀರೆ ಹಾಗೂ ಇತರೆ ಕೈಮಗ್ಗ ಉತ್ಪನ್ನಗಳನ್ನು ನಿಗಮದ ವತಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿತವಾಗಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆಗಳ ಮೂಲಕ ಮಾರಾಟ ಮಾಡಲಾಗುತ್ತಿದೆ.<br>• ಕೆ.ಹೆಚ್.ಡಿ.ಸಿ. ನಿಗಮದ ಕೈಮಗ್ಗ ಉತ್ಪನ್ನಗಳನ್ನು ಇ-ಕಾಮರ್ಸ್ ವೇದಿಕೆ ಮುಖಾಂತರ ಮಾರಾಟ ಮಾಡುವುದರ ಮೂಲಕ ಕೆ.ಹೆಚ್.ಡಿ.ಸಿ. ನಿಗಮ ತನ್ನ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವ ಯೋಜನೆ ಹಮ್ಮಿಕೊಂಡಿರುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಾಯೋಗಿಕವಾಗಿ ನೇಕಾರರ ಭವನದಲ್ಲಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆಯಲ್ಲಿ ಇ-ಕಾಮರ್ಸ್ ವೇದಿಕೆಯನ್ನು ಪ್ರಾರಂಭ ಮಾಡಲಾಗಿದ್ದು, ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ.<br>• ಬೆಂಗಳೂರು ಅಂತರಾಷ್ಟ್ರೀಯ ನಿಲ್ದಾಣದ ಆವರಣದಲ್ಲಿ "ಕಲಾಲೋಕ" ಕೈಮಗ್ಗ ಮಾರಾಟ ಮಳಿಗೆಯನ್ನು ಸ್ಥಾಪಿಸಲಾಗಿದೆ. ಸದರಿ ಕಲಾಲೋಕ ಕೈಮಗ್ಗ ಮಾರಾಟ ಮಳಿಗೆಯ ಮುಖಾಂತರ ರಾಜ್ಯದ ಕೈಮಗ್ಗ ಉತ್ಪನ್ನಗಳನ್ನು ಹಾಗೂ ವಿಶ್ವವಿಖ್ಯಾತ ಸಾಂಪ್ರದಾಯಿಕ ಸೀರೆಗಳ ಮಾರಾಟಕ್ಕೆ ಸೌಲಭ್ಯ ಕಲ್ಪಿಸಲಾಗಿದೆ. |

ಸಂಖ್ಯೆ: CI 80 JAKE 2026

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

Scanned by CamScanner